11. 1994 ನೇ ಇಸವಿಯ ಕರ್ನಾಟಕ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧಿನಿಯಮ ಕಲಂ 21(1) (vii) ರ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು:– ಸೂಚಿಸಲಾಗಿದೆ.

11. ಶಾಸನ ರಚನೆ

ವಿಧೇಯಕಗಳನ್ನು ಮಂಡಿಸುವುದು.

ಕರ್ನಾಟಕ ಲಘು ವಿವಾದ ನ್ಯಾಯಾಲಯಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2015

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್, ಮಾನ್ಯ ಸಹಕಾರ ಸಚಿವರು (ಶ್ರೀ ಟಿ.ಬಿ. ಜಯಚಂದ್ರ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಲಘುವಿವಾದ ನ್ಯಾಯಾಲಯಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವನೆಯನ್ನು ಮಂಡಿಸಲಾಯಿತು. ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2015ನೇ ಸಾಲಿನ ಕರ್ನಾಟಕ ಲಘು ವಿವಾದ ನ್ಯಾಯಾಲಯಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.
ಪ್ರಸ್ತಾದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಮಾನ್ಯ ಮಂತ್ರಿಗಳು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.

(ಅನುಬಂಧ–3)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್, ಮಾನ್ಯ ಸಹಕಾರ ಸಚಿವರು (ಶ್ರೀ ಟಿ.ಬಿ. ಜಯಚಂದ್ರ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಲಘುವಿವಾದ ನ್ಯಾಯಾಲಯಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಗಿದೆ. ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವುದು.

(ಸದನವು ರಾತ್ರಿ 7 ಗಂಟೆ 48 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 07.07.2015 ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)